ಪಿ.ಡಬ್ಲ್ಯೂ-1 : : ಒ.ಎಸ್ ನಂ.267/2017

ಸಾಕ್ಷಿಗೆ ದಿನಾಂಕ:20.02.2019 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯವಿಚಾರಣೆ ಶ್ರೀ ಬಿ.ಎನ್.ಎಸ್ ವಾದಿ ಪರ ವಕೀಲರಿಂದ:-

ನಾನು ನನ್ನ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ನಂಬಿಕೆ, ಮಾಹಿತಿಗೆ ಸತ್ಯವಾಗಿದ್ದು, ಅದು ನನ್ನ ಹೇಳಿಕೆಯಂತೆ ಬರೆಯಲ್ಪಟ್ಟಿದೆ.

ದಿನಾಂಕ.16.08.2004 ರ ಕ್ರಯಪತ್ರದ ದೃಢೀಕೃತ ಪ್ರತಿ, ದಿನಾಂಕ.18.05.2007 ರ ಹಕ್ಕು ನಿವೃತ್ತಿ ಪತ್ರದ ದೃಢೀಕೃತ ಪ್ರತಿ, ಸರ್ವೆ ನಂ.110 ಮತ್ತು 108/3 ರ ಪಹಣಿ ಪತ್ರಿಕೆಗಳು, ಎಂ.ಆರ್ 19/2004-05 ರ ಪ್ರತಿ, ದಿನಾಂಕ.16.05.2005 ರ ತಹಶಿಲ್ದಾರ್ ರವರ ಹಿಂಬರಹ, ಬೆಳೆ ದೃಢೀಕರಣ ಪತ್ರ, ದಿನಾಂಕ.25.04.2005 ರ ತಹಶಿಲ್ದಾರ್ ರವರ ಪತ್ರ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ರವರು ನನಗೆ ನೀಡಿರುವ ಅನುಮತಿ ಪತ್ರ, ದೊಡ್ಡಸಾದನಹಳ್ಳಿ ವೃತ್ತದ ಗ್ರಾಮ ಲೆಕ್ಕಾಧಿಕಾರಿ ನೀಡಿರುವ ದೃಢೀಕರಣ ಪತ್ರ, 4 ವಿದ್ಯುತ್ ಬಿಲ್ ಮತ್ತು 4 ವಿದ್ಯುತ್ ಪಾವತಿ ರಶೀದಿಗಳು, ಎರಡು ಕಂದಾಯ ರಶೀದಿಗಳು, ದಿನಾಂಕ.11.07.2017 ರಂದು ನಾನು ಹಾರೋಹಳ್ಳಿ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರಿಗೆ ನೀಡಿದ ದೂರಿನ ಪ್ರತಿ ಮತ್ತು ಸದರಿ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ರವರು ನೀಡಿದ ಹಿಂಬರಹ, 12 ಭಾವಚಿತ್ರಗಳು ಮತ್ತು ಅವುಗಳ ಸಿ.ಡಿ ಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 27 ಮತ್ತು ಎಂ.ಒ-1 ಎಂದು ಗುರುತಿಸಲಾಯಿತು.

ಅಸಲು ದಾವಾ 683/2014 ರ ದಾವಾಪತ್ರದ ದೃಢೀಕೃತ ಪ್ರತಿ, ದಿ.09.05.2017 ರ ಕ್ರಯದ ಕರಾರಿನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-28 ಮತ್ತು 29 ಎಂದು ಗುರುತಿಸಲಾಯಿತು.

ಈ ಮೂಲಕ ನನ್ನ ಸಾಕ್ಷ್ಯವನ್ನು ಅಂತ್ಯಗೊಳಿಸಿದ್ದು, ನನ್ನ ದಾವೆಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದುಡಲಾಯಿತು.

( ನನ್ನ ಉಕ್ತಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ